ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1998.

# *ಶಕ್ತಿಯನ್ನು ಕೊಡುವ ಸೇವೆ ಮಾಡಲು ಸೆಳೆತ ಮುಕ್ತರಾಗಿ ಬೇಹದ್ದಿನ ವೈರಾಗಿ ಆಗಿರಿ.*

(सकाश देने की सेवा करने के लिए लगाव मुक्त बन बेहद के वैरागी बनो)

ಇಂದು ವಿಶೇಷವಾಗಿ ಸ್ನೇಹದ ದಿನವಾಗಿದೆ. ಅಮೃತವೇಳೆಯಿಂದ ಹಿಡಿದು ನಾಲ್ಕಾರು ಕಡೆಯ ಮಕ್ಕಳು ತಮ್ಮ ಹೃದಯದ ಸ್ನೇಹವನ್ನು ಬಾಪ್‌ದಾದಾರವರಿಗೆ ಅರ್ಪಿಸುತ್ತಿದ್ದಾರೆ. ಸರ್ವ ಮಕ್ಕಳ ಸ್ನೇಹದ ಮುತ್ತುಗಳ ಮಾಲೆಗಳು ಬಾಪ್‌ದಾದಾರವರ ಕೊರಳಿನಲ್ಲಿ ಬಿದ್ದವು. ಇಂದು ಒಂದು ಕಡೆ ಸ್ನೇಹದ ಮುತ್ತುಗಳ ಮಾಲೆಗಳು, ಇನ್ನೊಂದು ಕಡೆ ಮಧುರಾತಿ ಮಧುರ ದೂರುಗಳ ಮಾಲೆಗಳಿದ್ದವು. ಆದರೆ ಈ ವರ್ಷ ದೂರುಗಳಲ್ಲಿ ಅಂತರ ನೋಡಿದರು. ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಿರಿ, ನಾವಂತು ಸಾಕಾರ ಪಾಲನೆಯನ್ನು ಪಡೆಯಲಿಲ್ಲ. ಮೊದಲು ಇಂತಹ ದೂರುಗಳು ಇರುತ್ತಿದ್ದವು. ಆದರೆ ಈ ವರ್ಷ ಹೆಚ್ಚು ಜನರ ನಿಂದೆ ಏನೆಂದರೆ ಈಗ ತಂದೆಯ ಸಮಾನರಾಗಿ ನಿಮ್ಮ ಹತ್ತಿರ ತಲುಪಿಬಿಡಬೇಕು. ಸಮಾನರಾಗುವಂತಹ ಉತ್ಸಾಹ ಉಲ್ಲಾಸ ಅಧಿಕರಲ್ಲಿ ಚೆನ್ನಾಗಿದೆ. ಸಮಾನರಾಗುವುದರ ಇಚ್ಛೆ ಬಹಳ ತೀವ್ರವಾಗಿದೆ, ಆಗಿ ಬಿಡಬೇಕು ಮತ್ತು ಬಂದು ಬಿಡಬೇಕು, ಆತ್ಮಿಕ ವಾರ್ತಾಲಾಪದಲ್ಲಿ ಬಹಳಷ್ಟು ಮಕ್ಕಳದ್ದು ಇದೇ ಸಂಕಲ್ಪವಾಗಿತ್ತು. ಬಾಪ್‌ದಾದಾರವರೂ ಮಕ್ಕಳಿಗೆ ಹೇಳುತ್ತಾರೆ - ಸಮಾನ ಭವ! ಸಂಪನ್ನ ಭವ! ಸಂಪೂರ್ಣ ಭವ! ಇದಕ್ಕೆ ಸಾಧನೆ ಬಹಳ ಸಹಜವಾಗಿದೆ, ಎಲ್ಲದಕ್ಕಿಂತ ಸಹಜ ಸಾಧನವಾಗಿದೆ - ಸದಾ ಸ್ನೇಹದ ಸಾಗರದಲ್ಲಿ ಸಮಾವೇಶ(ಲೀನ)ರಾಗಿರಿ. ಹೇಗೆ ಇಂದು ಸ್ನೇಹದಲ್ಲಿ ಲೀನವಾಗಿದ್ದಾಗ ಮತ್ತೇನಾದರೂ ನೆನಪಿತ್ತೇ? ಬಾಪ್‌ದಾದಾರವರ ಹೊರತು ಬೇರೆ ಏನಾದರೂ ನೆನಪಿತ್ತೇ? ಎದ್ದೇಳುತ್ತಾ, ಕುಳಿತುಕೊಳ್ಳುತ್ತಾ ಸ್ನೇಹದಲ್ಲಿ ಲೀನವಾಗಿ ಇರಿ. ನಡೆಯುತ್ತಾ – ತಿರುಗಾಡುತ್ತಾ ಏನು ನೆನಪಿತ್ತು? ಬ್ರಹ್ಮಾ ತಂದೆಯ ಚರಿತ್ರೆ ಮತ್ತು ಚಿತ್ರ, ಚಿತ್ರವೂ ಮುಂದೆ ಇದೆ ಮತ್ತು ಚರಿತ್ರೆಯು ಸ್ಮೃತಿಯಲ್ಲಿ ಇರಲಿ. ಎಲ್ಲರೂ ಸ್ನೇಹದ ಅನುಭವ ಇಂದು ವಿಶೇಷವಾಗಿ ಮಾಡಿದ್ದೀರಲ್ಲವೇ? ಪರಿಶ್ರಮವಾಯಿತೇ? ಸಹಜವಾಯಿತಲ್ಲವೇ. ಸ್ನೇಹ ಇಂತಹ ಶಕ್ತಿಯಾಗಿದೆ ಇದು ಎಲ್ಲವನ್ನು ಮರೆಸಿಬಿಡುತ್ತದೆ. ದೇಹವು ನೆನಪಿರುವುದಿಲ್ಲ, ದೇಹದ ಪ್ರಪಂಚವು ನೆನಪಿರುವುದಿಲ್ಲ. ಸ್ನೇಹವು ಪರಿಶ್ರಮದಿಂದ ಬಿಡಿಸಿ ಬಿಡುತ್ತದೆ. ಎಲ್ಲಿ ಪ್ರೀತಿಯಿರುತ್ತದೆಯೋ ಅಲ್ಲಿ ಪರಿಶ್ರಮವಿರುವುದಿಲ್ಲ. ಸ್ನೇಹವು ಸದಾ ಸಹಜವಾಗಿ ಬಾಪ್‌ದಾದಾರವರ ಕೈ ತಮ್ಮ ಮೇಲೆ ಇರುವ ಅನುಭವ ಮಾಡಿಸುತ್ತದೆ. ಸ್ನೇಹವು ಛತ್ರಛಾಯೆಯಾಗಿ ಮಾಯಾಜೀತ್ ರನ್ನಾಗಿ ಮಾಡುತ್ತದೆ. ಎಷ್ಟೇ ದೊಡ್ಡ ಸಮಸ್ಯೆರೂಪಿ ಬೆಟ್ಟವಿರಲಿ, ಸ್ನೇಹ ಬೆಟ್ಟವನ್ನು ಸಹ ನೀರಿನ ಸಮಾನ ಹಗುರವನ್ನಾಗಿ ಮಾಡಿಬಿಡುತ್ತದೆ. ಸ್ನೇಹದಲ್ಲಿ ಇರುವುದು ಬರುತ್ತದೆಯಲ್ಲವೇ? ಇಂದು ಇದ್ದು ನೋಡಿದ್ದೀರಿ ಅಲ್ಲವೇ. ಏನಾದರೂ ನೆನಪಿತ್ತೇ? ಇರಲಿಲ್ಲವಲ್ಲವೇ! ಬಾಬಾ, ಬಾಬಾ ಮತ್ತು

ಬಾಬಾ... ಒಬ್ಬರ ನೆನಪಿನಲ್ಲಿ ಲವಲೀನರಾಗಿರಿ. ಬಾಪ್‌ದಾದಾರವರು ಹೇಳುತ್ತಾರೆ ಬೇರೆ ಯಾವುದೇ ಪುರುಷಾರ್ಥ ಮಾಡದಿದ್ದರೂ ಕೇವಲ ಬಾಪ್‌ದಾದಾರವರ ಸ್ನೇಹದ ಸಾಗರದಲ್ಲಿ ಲೀನವಾಗಿರಿ. ಲೀನವಾಗುವುದು ಬರುತ್ತದೆಯೇ? ಕೆಲ-ಕೆಲವೊಮ್ಮೆ ಮಕ್ಕಳು ಸ್ನೇಹದ ಸಾಗರನಲ್ಲಿ ಲೀನವಾಗುತ್ತಾರೆ ಆದರೆ ಸ್ವಲ್ಪ ಸಮಯದ ನಂತರ ಹೊರಗಡೆ ಬಂದು ಬಿಡುತ್ತಾರೆ. ಈಗೀಗ ಹೇಳುತ್ತಾರೆ ಬಾಬಾ, ಮಧುರ ಬಾಬಾ, ಪ್ರಿಯ ಬಾಬಾ ಮತ್ತು ಈಗೀಗ ಹೊರಗಡೆ ಬಂದು ಬೇರೆ ಮಾತುಗಳಲ್ಲಿ ತೊಡಗುತ್ತಾರೆ. ಕೆಲವರು ಕೇವಲ ಸ್ವಲ್ಪ ಮುಳುಗಿ ಎದ್ದ ಹಾಗೆಯೇ ಸ್ನೇಹದಲ್ಲಿ ಲೀನವಾಗಿ, ಮುಳುಗಿ ಹೊರಬರುತ್ತಾರೆ. ಆದರೆ ಲೀನವಾಗಿ ಆಗ ಸ್ನೇಹದ ಶಕ್ತಿ ಎಲ್ಲದರಿಂದ ಸಹಜವಾಗಿ ಮುಕ್ತರನ್ನಾಗಿ ಮಾಡಿಬಿಡುತ್ತದೆ.

ಎಲ್ಲಾ ಮಕ್ಕಳನ್ನು ಬ್ರಾಹ್ಮಣ ಜನ್ಮದ ಆದಿಯ ಅನುಭವ- ಸ್ನೇಹವೇ ಬ್ರಾಹ್ಮಣರನ್ನಾಗಿ ಮಾಡಿತು. ಸ್ನೇಹವನ್ನು ಪರಿವರ್ತನೆ ಮಾಡಿ. ತಮ್ಮ ಜನ್ಮದ ಆದಿಯ ಸಮಯದ ಅನುಭವ ನೆನಪಿದೆಯಲ್ಲವೇ? ಜ್ಞಾನ ಮತ್ತು ಯೋಗವು ಸಿಕ್ಕಿತು ಆದರೆ ಸ್ನೇಹವು ಆಕರ್ಷಣೆ ಮಾಡಿ ತಂದೆಯವರನ್ನಾಗಿ ಮಾಡಿತು. ಒಂದುವೇಳೆ ಸದಾ ಸ್ನೇಹದ ಶಕ್ತಿಯಲ್ಲಿದ್ದರೆ ಸದಾ ಪರಿಶ್ರಮದಿಂದ ಮುಕ್ತರಾಗಿಬಿಡುತ್ತೀರಿ. ಹೇಗಿದ್ದರೂ ಮುಕ್ತಿ ವರ್ಗವನ್ನು ಆಚರಿಸುತ್ತೀದೀರಲ್ಲವೇ. ಪರಿಶ್ರಮದಿಂದಲೂ ಮುಕ್ತರಾಗಿರಿ. ಅದರ ಸಹಜ ಸಾಧನ ಸ್ನೇಹದಲ್ಲಿ ಲೀನವಾಗಿರುವುದಾಗಿದೆ. ಸ್ನೇಹದ ಅನುಭವ ಎಲ್ಲರಿಗೂ ಇದೆಯಲ್ಲವೇ? ಅಥವಾ ಇಲ್ಲವೇ? ಒಂದುವೇಳೆ ಬಾಪ್‌ದಾದಾರವರೊಂದಿಗೆ ಹೆಚ್ಚು ಸ್ನೇಹ ಯಾರದಿದೆ? ಎಂದು ಯಾರಿಗಾದರೂ ಕೇಳಿದರೆ ಎಲ್ಲರೂ ಕೈ ಎತ್ತುವಿರಿ ನನ್ನದೆಂದು. (ಎಲ್ಲರೂ ಕೈ ಅಲುಗಾಡಿಸಿದರು) ಸೈಲೆನ್ಸ್ ಕೈ ಎತ್ತಿರಿ, ಶಬ್ದದಲ್ಲ. ಬಾಪ್‌ದಾದಾರವರು ಇಂದು ಇದನ್ನೇ ಹೇಳುತ್ತಿದ್ದಾರೆ ಸ್ನೇಹದ ಶಕ್ತಿಯನ್ನು ಸದಾ ಕಾರ್ಯದಲ್ಲಿ ತೊಡಗಿಸಿ. ಸಹಜವಾಗಿದೆಯಲ್ಲವೇ! ದೇಹವನ್ನು ಮರೆಯಬೇಕು, ದೇಹದ ಪ್ರಪಂಚವನ್ನು ಮರೆಯಬೇಕು, ಮಾಯಾಜಿತ್ ಆಗಬೇಕು ಎಂದು ಯೋಗವನ್ನು ಜೋಡಿಸುತ್ತಿದ್ದೀರಿ. ಸ್ನೇಹದ ಛತ್ರ ಛಾಯೆಯಲ್ಲಿ ಇದ್ದಾಗ ಮಾಯೆ ಬರುವುದಿಲ್ಲ. ಸ್ನೇಹ ಸಾಗರದಿಂದ ಹೊರಗೆ ಬರುತ್ತಿದ್ದೀರಿ ಆಗ ಮಾಯೆಯು ನೋಡಿ ತನ್ನವರನ್ನಾಗಿ ಮಾಡಿಕೊಳ್ಳುತ್ತಿದೆ. ಆದ್ದರಿಂದ ಹೊರಗೆ ಬರಬಾರದು ಲೀನವಾಗಿಯೇ ಇರಿ. ಸ್ನೇಹಿತರಾದವರು ಯಾವ ಕಾರ್ಯ ಮಾಡುತ್ತಿದ್ದರೂ ತಮ್ಮ ಸ್ನೇಹಿತನನ್ನು ಮರೆಯುವುದಿಲ್ಲ. ಸ್ನೇಹದಲ್ಲಿ ಮುಳುಗಿ ಪ್ರತಿಯೊಂದು ಕಾರ್ಯ ಮಾಡುತ್ತಾರೆ. ಇಂದು ಹೇಗಾದರೆ ಸ್ನೇಹದಲ್ಲಿ ಲೀನವಾಗಿ ಇದ್ದೀರೋ, ಅದೇ ರೀತಿಯಾಗಿ ಸದಾ ಸ್ನೇಹದಲ್ಲಿ ಲೀನವಾಗಿ ಇರಲಾಗುವುದಿಲ್ಲವೇ? ಸ್ನೇಹ ಸಹಜವಾಗಿಯೇ ಸಮಾನವಾಗಿ ತಯಾರು ಮಾಡುತ್ತದೆ. ಏಕೆಂದರೆ ಯಾರೊಂದಿಗೆ ಸ್ನೇಹವಿರುತ್ತದೆಯೋ ಅವರಂತೆ ತಯಾರಾಗುವುದು ಕಷ್ಟವೆನಿಸುವುದಿಲ್ಲ.

ಬ್ರಹ್ಮಾ ತಂದೆ ಎಂದರೆ ಹೃದಯದ ಪ್ರೀತಿಯಿದೆ, ಬ್ರಹ್ಮಾ ತಂದೆಯದು ಮಕ್ಕಳೊಂದಿಗೆ ಅತೀ ಸ್ನೇಹವಿದೆ. ಸದಾ ಒಂದೊಂದು ಮಗುವನ್ನು ಪ್ರತ್ಯಕ್ಷ ಮಾಡಿ ವಿಶೇಷ ಸಮಾನರಾಗುವ ಶಕ್ತಿ ಕೊಡುತ್ತಿರುತ್ತಾರೆ. ಹೇಗಾದರೆ ಬ್ರಹ್ಮಾ ತಂದೆ ತನ್ನ ಕಳೆದ ಜೀವನದಲ್ಲಿ ಒಂದೊಂದು ರತ್ನವನ್ನು ನೋಡುತ್ತಾ, ಪ್ರತಿಯೊಂದು ರತ್ನದ ಮೌಲ್ಯವನ್ನು ತಿಳಿದುಕೊಂಡು ವಿಶೇಷ ಕಾರ್ಯದಲ್ಲಿ ತೊಡಗಿಸುತ್ತಿದ್ದರೋ, ಅದೇ ರೀತಿ ಈಗಲೂ ಸಹ ಒಂದೊಂದು ವಿಶೇಷ ರೂಪದಿಂದ ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸುವ ಸಂಕಲ್ಪ ಕೊಡುತ್ತಿರುತ್ತಾರೆ. ಮತ್ತು ಪ್ರತಿಯೊಬ್ಬರ ವಿಶೇಷತೆಯ ವಾಹ್ ವಾಹ್ ನ ಹಾಡನ್ನು ಹಾಡುತ್ತಿರುತ್ತಿದ್ದಾರೆ. ವಾಹ್ ನನ್ನ ಅಮೂಲ್ಯ ರತ್ನಗಳೇ ಎಂದು. ಕೆಲವು ಮಕ್ಕಳು ಬ್ರಹ್ಮಾತಂದೆಯು ವತನದಲ್ಲಿ ಏನು

ಮಾಡುತ್ತಾರೆ? ನಾವಂತು ಇಲ್ಲಿ ಸೇವೆಯನ್ನು ಮಾಡುತ್ತಿರುತ್ತೇವೆ ಮತ್ತು ಬ್ರಹ್ಮಾ ತಂದೆ ಅಲ್ಲಿ ವತನದಲ್ಲಿ ಏನು ಮಾಡುತ್ತಾರೆ? ಎಂದು ಯೋಚಿಸುತ್ತಾರೆ. ಆದರೆ ತಂದೆಯು ಹೇಳುತ್ತಾರೆ ಹೇಗೆ ಸಾಕಾರ ರೂಪದಲ್ಲಿ ಸದಾ ಮಕ್ಕಳ ಜೊತೆಯಿದ್ದರೋ, ಹಾಗೆಯೇ ವತನದಲ್ಲಿಯೂ ಇರುತ್ತಾರೆ. ಮಕ್ಕಳ ಜೊತೆಯಲ್ಲಿಯೇ ಇರುತ್ತಾರೆ, ಒಂಟಿಯಾಗಿರುವುದಿಲ್ಲ. ಮಕ್ಕಳಲಿಲ್ಲದೇ ತಂದೆಗೆ ಮಜಾಬರುವುದಿಲ್ಲ. ಹೇಗೆ ಮಕ್ಕಳಿಗೆ ತಂದೆಯಿಲ್ಲದೇ ಏನು ತೋಚುವುದಿಲ್ಲವೋ, ಹಾಗೆಯೇ ತಂದೆಗೂ ಸಹ ಮಕ್ಕಳಲಿಲ್ಲದೇ ಬೇರೇನು ತೋಚುವುದಿಲ್ಲ. ಒಬ್ಬರೇ ಇರುವುದಿಲ್ಲ, ಜೊತೆಯಲ್ಲಿರುತ್ತಾರೆ. ಸಾಕಾರದಲ್ಲಂತೂ ಜೊತೆಯ ಅನುಭವ ಸಾಕಾರರೂಪದಲ್ಲಿ ಕೆಲವು ಮಕ್ಕಳು ಮಾಡಬಹುದ್ದಿತ್ತು, ಈಗ ಅವ್ಯಕ್ತ ರೂಪದಲ್ಲಿ, ಪ್ರತಿ ಮಗುವಿನ ಜೊತೆ ಯಾವ ಸಮಯ ಬೇಕಾದರೂ, ಆಗ ಜೊತೆಯನ್ನು ನಿಭಾಯಿಸುತ್ತಿರುತ್ತಾರೆ. ಹೇಗೆ ಚಿತ್ರಗಳಲ್ಲಿ ತೋರಿಸುತ್ತಾರಲ್ಲವೇ – ಅವರು ಒಬ್ಬೊಬ್ಬ ಗೋಪಿಯರ ಜೊತೆ ಕೃಷ್ಣನನ್ನು ತೋರಿಸಿದ್ದಾರೆ ಆದರೆ ಇದು ಈ ಸಮಯದ ಮಹಿಮೆ(ಗಾಯನ)ವಾಗಿದೆ. ಈಗ ಅವ್ಯಕ್ತ ರೂಪದಲ್ಲಿ ಪ್ರತಿ ಮಗುವಿನ ಜೊತೆ ಯಾವಾಗ ಬೇಕಾದರೂ, ರಾತ್ರಿಯ ಎರಡು ಗಂಟೆಗೆ, ಎರಡೂವರೆಗೆ, ಯಾವ ಸಮಯದಲ್ಲಾದರೂ ಜೊತೆಯನ್ನು ನಿಭಾಯಿಸುತ್ತಿರುತ್ತಾರೆ. ಸಾಕಾರದಲ್ಲಂತು ಸೆಂಟರ್ಗಳಿಗೆ ಸುತ್ತುವುದು ಕೆಲ ಕೆಲವೊಮ್ಮೆ ಮಾತ್ರ ಆಗುತ್ತಿತು ಆದರೆ ಈ ಅವ್ಯಕ್ತ ರೂಪದಲ್ಲೀ ಪವಿತ್ರ ಪವೃತ್ತಿಯಲ್ಲಿಯೂ ಸುತ್ತುತ್ತಾರೆ. ತಂದೆಯ ಕಾರ್ಯ ಏನಾಗಿದೆ, ಮಕ್ಕಳನ್ನು ಸಮಾನರನ್ನಾಗಿ ಮಾಡಿಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗುವುದು, ಇದೇ ಕಾರ್ಯವಾಗಿದೆಯಲ್ಲವೇ ಮತ್ತೇನಾಗಿದೆ? ಇದರಲ್ಲಿಯೇ ಬಿಜಿಯಾಗಿರುತ್ತಾರೆ.

ಇಂದು ಬಾಪ್‌ದಾದಾರವರು ಮಕ್ಕಳಿಗೆ ವಿಶೇಷ ಪರಿಶ್ರಮದಿಂದ ಮುಕ್ತ ಭವ! ಎಂಬ ವರದಾನವನ್ನು ಕೊಡುತ್ತಿದ್ದಾರೆ. ಯಾವುದೇ ಕಾರ್ಯ ಮಾಡಿದರೆ ಡಬಲ್ ಲೈಟ್ ಆಗಿ ಕಾರ್ಯ ಮಾಡಿ, ಆಗ ಪರಿಶ್ರಮವನ್ನು ಮನೋರಂಜನೆಯಂತೆ ಅನುಭವ ಮಾಡುವಿರಿ ಏಕೆಂದರೆ ಬಾಪ್‌ದಾದಾರವರಿಗೆ ಮಕ್ಕಳು ಪರಿಶ್ರಮ ಪಡುವುದು, ಯುದ್ಧ ಮಾಡುವುದು, ಸೋಲು ಮತ್ತು ಗೆಲುವಿನ ಆಟವಾಡುವುದು ಇಷ್ಟವಾಗುವುದಿಲ್ಲ. ಅಂದಾಗ ಮುಕ್ತ ವರ್ಷವನ್ನು ಆಚರಿಸುತ್ತೀದ್ದೀರಲ್ಲವೇ! ಆಚರಿಸುತ್ತಿದ್ದೀರಾ ಅಥವಾ ಪರಿಶ್ರಮದಲ್ಲಿ ತೊಡಗಿದ್ದೀರಾ? ಇಂದು ವಿಶೇಷ ಈ ವರದಾನ ನೆನಪಿಟ್ಟುಕೊಳ್ಳಿ - ಪರಿಶ್ರಮದಿಂದ ಮುಕ್ತ ಭವ! ಈ ಸಂಗಮಯುಗ ಪರಿಶ್ರಮದಿಂದ ಮುಕ್ತರಾಗುವ ಯುಗವಾಗಿದೆ. ಮೋಜಿನಲ್ಲಿರುವುದಾಗಿದೆ. ಒಂದುವೇಳೆ ಪರಿಶ್ರಮದಲ್ಲಿದ್ದರೆ ಮೋಜಿನಲ್ಲಿರಲು ಸಾಧ್ಯವಿಲ್ಲ. ಒಂದೇ ಯುಗ ಪರಮ ಆತ್ಮ ಮತ್ತು ಆತ್ಮರ ಮೋಜು ಆಚರಿಸುವ ಯುಗವಾಗಿದೆ. ಆತ್ಮ, ಪರಮಾತ್ಮನ ಸ್ನೇಹದ ಯುಗವಾಗಿದೆ. ಮಿಲನದ ಯುಗವಾಗಿದೆ. ಅಂದಾಗ ದೃಢ ಸಂಕಲ್ಪ ಮಾಡಿ – ಇಂದಿನಿಂದ ಪರಿಶ್ರಮದಿಂದ ಮುಕ್ತರಾಗಿ ಬಿಡುವೆವು. ಆಗುವಿರಲ್ಲವೇ? ಇಲ್ಲಿ ಕೈ ಎತ್ತಿ ಮತ್ತು ಅಲ್ಲಿ ಹೋಗಿ ಏನು ಮಾಡುವುದು, ಹೇಗೆ ಮಾಡುವುದು? ಎಂದು ಹೇಳುವುದಿಲ್ಲ ತಾನೇ. ಏಕೆಂದರೆ ಬಾಪ್‌ದಾದಾರವರ ಹತ್ತಿರ ಪ್ರತಿಯೊಂದು ಮಗುವಿನ ದೃಢ ಸಂಕಲ್ಪದ ಪೂರ್ಣ ಫೈಲ್ ಇದೆ. ಬಾಪ್‌ದಾದಾರವರು ಆಗಾಗ ಮಕ್ಕಳ ಫೈಲ್ ನೋಡುತ್ತಾರೆ. ಪದೇ-ಪದೇ ದೃಢ ಸಂಕಲ್ಪ ಮಾಡಿದ್ದಾರಲ್ಲವೇ. ಯಾವಾಗಿನಿಂದ ಜನ್ಮ ಪಡೆದಿದ್ದೀರಿ ಮತ್ತು ಇಲ್ಲಿಯ ತನಕ ಎಷ್ಟು ಬಾರಿ ಸಂಕಲ್ಪ ಮಾಡಿದ್ದೀರಿ, ಇದನ್ನು ಮಾಡುವೆವು, ಇದನ್ನು ಮಾಡುವೆವು, ... ಆದರೆ ಅದನ್ನು ಪೂರ್ಣ ಮಾಡಿಲ್ಲ. ಆತ್ಮಿಕ ವಾರ್ತಾಲಾಪ ಬಹಳ ಚೆನ್ನಾಗಿ ಮಾಡುತ್ತಾರೆ, ಬಾಪ್‌ದಾದಾರವರನ್ನೂ ಸಹ ಖುಷಿ ಪಡಿಸುತ್ತೀರಿ. ಹೇಗೆ

ಜಿಜ್ಞಾಸುಗಳನ್ನು ಪ್ರಭಾವಿತರನ್ನಾಗಿ ಮಾಡುತ್ತೀರಲ್ಲವೇ, ಬಾಪ್‌ದಾದಾರವರನ್ನು ಸಹ ಪ್ರಭಾವಿತರನ್ನಾಗಿ ಮಾಡುತ್ತಿದ್ದೀರಿ ಆದರೆ ದೃಢ ಸಂಕಲ್ಪದ ಪ್ರಭಾವ ಸ್ವಲ್ಪ ಸಮಯವಿರುತ್ತದೆ, ಸದಾ ಇರುತ್ತಿಲ್ಲ. ಬಾಪ್‌ದಾದಾರವರ ಫೈಲ್ ಹೆಚ್ಚುತ್ತಲೇ ಹೋಗುತ್ತದೆ. ಯಾವುದಾದರೂ ಕಾರ್ಯಕ್ರಮವಾದಾಗ ಬಾಪ್‌ದಾದಾರವರ ಫೈಲ್ ನಲ್ಲಿ ಒಂದು ಪ್ರತಿಜ್ಞೆಯ ಪತ್ರ ಜಮಾ ಆಗಿ ಬಿಡುತ್ತದೆ, ಅದಕ್ಕಾಗಿಯೇ ಬಾಪ್‌ದಾದಾರವರು ಬರೆಯುತ್ತಿಲ್ಲ .

ಇಂದು ಸಹ ಎಲ್ಲರೂ ಸಂಕಲ್ಪವಂತೂ ಮಾಡುತ್ತೀದ್ದೀರಿ, ಈಗ ಎಲ್ಲಿಯವರೆಗೆ ನಡೆಯುತ್ತದೆ, ಫೈಲ್ನಲ್ಲಿ ಕಾಗದ ಎಲ್ಲಿಯವರೆಗೆ ಇರುತ್ತದೆ ಎಂದು ತಂದೆಯು ಸಹ ನೋಡುತ್ತಾರೆ. ಮಕ್ಕಳು ತಂದೆಯ ಸಮಾನವಾದಾಗ ಫೈಲ್ ಸಮಾಪ್ತಿಯಾಗಿ ಫೈನಲ್ ಆಗಿಬಿಡುತ್ತದೆ. ಈಗಂತೂ ಬಹಳಷ್ಟು ಫೈಲ್ಗಳಿವೆ. ಕೇವಲ ಸ್ನೇಹದಲ್ಲಿ ಮುಳುಗಿರಿ, ಸ್ನೇಹದ ಸಾಗರದಿಂದ ಹೊರಗಡೆ ಬರಬೇಡಿರಿ. ಬ್ರಹ್ಮಾ ತಂದೆಯೊಂದಿಗೆ ಹೃದಯದ ಸ್ನೇಹವಿದೆಯಲ್ಲವೇ? ಸ್ನೇಹಿಯನ್ನು ಫಾಲೋ ಮಾಡುವುದು ಕಷ್ಟವಾಗುವುದಿಲ್ಲ. ಸ್ನೇಹಕ್ಕಾಗಿ ಹೇಳುತ್ತಾರೆ ಎಲ್ಲಿ ಸ್ನೇಹವಿರುತ್ತದೆಯೋ, ಅಲ್ಲಿ ಪ್ರಾಣವೂ ಬಲಿಹಾರಿಯಾಗುತ್ತದೆ. ಬಾಪ್‌ದಾದಾರವರು ಪ್ರಾಣವನ್ನು ಬಲಿಹಾರ ಮಾಡಲು ಹೇಳುವುದಿಲ್ಲ, ಹಳೆಯ ಪ್ರಪಂಚವನ್ನು ಬಲಿದಾನ ಮಾಡಲು ಹೇಳುತ್ತಿದ್ದಾರೆ. ಇದರ ಫೈನಲ್ ದಿನಾಂಕವನ್ನು ನಿಗಧಿ ಮಾಡಿರಿ. ಬೇರೆ ಕಾರ್ಯಗಳ ದಿನಾಂಕಗಳನ್ನು ನಿಗಧಿ ಪಡಿಸುತ್ತೀರಿ, 20ನೆಯ ತಾರೀಖಿಗೆ ಈ ಕಾರ್ಯಕ್ರಮ, 24ನೆಯ ತಾರೀಖಿಗೆ ಈ ಕಾರ್ಯಕ್ರಮ ಎಂದು ಆದರೆ ಇದರ ದಿನಾಂಕವನ್ನು ಯಾವಾಗ ನಿಗಧಿ ಪಡಿಸುತ್ತೀರಿ? (ಇದರ ದಿನಾಂಕ ಬಾಪ್‌ದಾದಾರವರು ನಿಗಧಿ ಪಡಿಸಲಿ) ಬಾಪ್‌ದಾದಾರವರು ಯಾವಾಗಲೋ ಎಂದು ಹೇಳುವುದಿಲ್ಲ, ಈಗಲೇ ಎಂದು ಹೇಳುತ್ತಾರೆ. ಬಾಪ್‌ದಾದಾರವರು ಯಾವಾಗಲೋ ಎಂದು ಹೇಳುತ್ತಾರೆಯೇ? ಈಗಲೇ ಎಂದು ಹೇಳುತ್ತಾರೆ. ಏನು ಮಾಡಬೇಕೋ ಅದನ್ನು ಈಗಲೇ ಮಾಡಿರಿ. ಆದರೆ ಬಾಪ್‌ದಾದಾರವರು ಸಮರ್ಥವಾಗಿದ್ದಾರೆ, ಸಮರ್ಥದ ಲೆಕ್ಕದಿಂದ ಈಗಲೇ ಎಂದು ಹೇಳುತ್ತಾರೆ. ಮಕ್ಕಳು ಯಾವಾಗ, ಯಾವಾಗ ಎನ್ನುವ ಅಭ್ಯಾಸದಲ್ಲಿ ಬಿದ್ದಿದ್ದಾರೆ. ಅದಕ್ಕಾಗಿಯೇ ಬಾಪ್‌ದಾದಾ ಮಕ್ಕಳನ್ನು ಈ ದಿನಾಂಕ ಯಾವಾಗ ನಿರ್ಣಯಿಸುತ್ತೀರಿ ಎಂದು ಕೇಳುತ್ತಿದ್ದಾರೆ. ನೀವು ಯಾವಾಗ, ಯಾವಾಗ ಎಂದರೆ ಬಾಬಾ ಕೂಡ ಯಾವಾಗ ಎಂದೇ ಕೇಳುತ್ತಾರೆ.

ಈಗ ಸಮಯ ಪ್ರಮಾಣ ಎಲ್ಲರಿಗೂ ಬೇಹದ್ದಿನ ವೈರಾಗ್ಯ ವೃತ್ತಿಯಲ್ಲಿ ಹೋಗಲೇ ಬೇಕಾಗುತ್ತದೆ. ಆದರೆ ಬಾಪ್‌ದಾದಾರವರು ಮಕ್ಕಳಿಗೆ ಸಮಯವು ಶಿಕ್ಷಕನಾಗಬಾರದು ಎಂದುಕೊಳ್ಳುತ್ತಾರೆ. ತಂದೆ ಶಿಕ್ಷಕನಾದಾಗ ಸಮಯಕ್ಕೆ ತಯಾರಾಗುವುದು ಎಂದರೆ ಸಮಯವನ್ನು ಶಿಕ್ಷಕನನ್ನಾಗಿ ಮಾಡಿಕೊಂಡ ಹಾಗೆ. ಇದರಲ್ಲಿ ಅಂಕಗಳು ಕಡಿಮೆಯಾಗಿಬಿಟ್ಟಿವೆ. ಈಗಲೂ ಕೆಲವು ಮಕ್ಕಳು ಹೇಳುತ್ತಿದ್ದಾರೆ ಸಮಯವು ಕಲಿಸುತ್ತದೆ, ಸಮಯವು ಬದಲಾಯಿಸುತ್ತದೆ ಎಂದು. ಸಮಯವನ್ನು ಅನುಸರಿಸಿ ತಯಾರಾದರೆ, ವಿಶ್ವದಲ್ಲಿರುವ ಆತ್ಮರು ಕೂಡ ಬದಲಾಗುತ್ತಾರೆ. ಆದರೆ ಮಕ್ಕಳಾದ ನೀವು ಸಮಯಕ್ಕಾಗಿ ಕಾಯಬೇಡಿರಿ. ಸಮಯವನ್ನು ಶಿಕ್ಷಕನನ್ನಾಗಿ ಮಾಡಿಕೊಳ್ಳಬೇಡಿರಿ. ವಿಶ್ವ ಶಿಕ್ಷಕನ ಮಾಸ್ಟರ್ ಶಿಕ್ಷಕರಾದ ನೀವು ರಚಯಿತರು. ಸಮಯ ನಿಮ್ಮ ರಚನೆ ಆದ್ದರಿಂದ ಓ ರಚೈತ ಆತ್ಮರೇ! ರಚನೆಯನ್ನು ಶಿಕ್ಷಕನನ್ನಾಗಿ ಮಾಡಿಕೊಳ್ಳಬೇಡಿರಿ. ಬ್ರಹ್ಮಾ ತಂದೆಯು ಸಮಯವನ್ನು ಶಿಕ್ಷಕರನ್ನಾಗಿ ಮಾಡಿಕೊಂಡಿಲ್ಲ, ಬೇಹದ್ದಿನ ವೈರಾಗ್ಯ ಆದಿಯಿಂದ ಅಂತ್ಯದವರೆಗೂ

ನಡೆಯುತ್ತದೆ. ಆದಿಯಲ್ಲಿ ನೋಡಿದರು ಇಷ್ಟೊಂದು ತನುವನ್ನು ಅರ್ಪಣೆ ಮಾಡಿದರು, ಮನಸ್ಸನ್ನು ಅರ್ಪಣೆ ಮಾಡಿದರು, ಧನವನ್ನು ಅರ್ಪಣೆ ಮಾಡಿದರು, ಆದರೆ ಸ್ವಲ್ಪವೂ ಸಹ ಆಕರ್ಷಣೆ ಅಥವಾ ಸೆಳೆತವಿರಲಿಲ್ಲ. ತನುವಿಗಾಗಿ ಸದಾ ಸ್ವಭಾವಿಕ ಮಾತುಗಳು ಇದೇ ಇತ್ತು - ಬಾಬಾರವರ ರಥವಾಗಿದೆ. ನನ್ನ ಶರೀರವಾಗಿದೆ, ಎಂದಲ್ಲ. ಬಾಬಾರವರ ರಥವಾಗಿದೆ. ಬಾಬಾರವರ ರಥಕ್ಕೆ ತಿನಿಸುತ್ತೇನೆ, ನಾನು ತಿನ್ನುತ್ತೇನೆ ಅಲ್ಲ, ತನುವಿನಿಂದಲೂ ಬೇಹದ್ದಿನ ವೈರಾಗ್ಯ. ಮನಸ್ಸಂತೂ ಮನ್ಮನಾಭವವಾಗಿಯೇ ಇತ್ತು. ಧನವೂ ಸಹ ತೊಡಗಿಸಿದರು, ಆದರೆ ಎಂದೂ ನನ್ನ ಧನವನ್ನು ತೊಡಗಿಸಲಾಗುತ್ತಿದೆ ಎಂಬ ಸಂಕಲ್ಪವೂ ಬರಲಿಲ್ಲ. ನಾನು ಧನವನ್ನು ತೊಡಗಿಸುತ್ತಿದ್ದೇನೆ ಅಥವಾ ನನ್ನ ಧನವನ್ನು ತೊಡಗಿಸಲಾಗುತ್ತದೆ ಎಂದು ಎಂದೂ ವರ್ಣನೆ ಮಾಡಲಿಲ್ಲ. ಬಾಬಾರವರ ಭಂಡಾರವಾಗಿದೆ, ಭೋಲಾನಾಥನ ಭಂಡಾರವಾಗಿದೆ. ಧನವನ್ನು ನನ್ನದು ಎಂದು ತಿಳಿದು ವ್ಯಕ್ತಿಗತವಾಗಿ ಒಂದು ರೂಪಾಯಿಯ ವಸ್ತುವನ್ನು ಸಹ ಎಂದೂ ಉಪಯೋಗಿಸಲಿಲ್ಲ. ಕನ್ಯೆಯರು ಮತ್ತು ಮಾತೆಯರ ಜವಾಬ್ದಾರಿಯಿದೆ, ಕನ್ಯೆಯರಿಗೆ ಮತ್ತು ಮಾತೆಯರಿಗೆ ಅರ್ಪಣೆ ಮಾಡಿದ್ದೇನೆ ನನ್ನತನವು ಇಲ್ಲ. ಸಮಯ, ಶ್ವಾಸ ತಮ್ಮ ಪ್ರತಿಯಿರಲಿಲ್ಲ ಅದರಿಂದಲೂ ಸಹ ಬೇಹದ್ದಿನ ವೈರಾಗಿಯಾಗಿದ್ದರು. ಇಷ್ಟೆಲ್ಲಾ ಪ್ರಕೃತಿ ದಾಸಿಯಾಗಿದ್ದರೂ ಸಹ ಯಾವುದೇ ಎಕ್ಸ್ ಟ್ರಾ ಸಾಧನ ಉಪಯೋಗಿಸಲಿಲ್ಲ. ಸದಾ ಸಾಧಾರಣ ಜೀವನದಲ್ಲಿದ್ದರು. ಯಾವುದೇ ಸ್ಪೆಶಲ್ ವಸ್ತುವನ್ನು ತಮ್ಮ ಕಾರ್ಯದಲ್ಲಿ ತೊಡಗಿಸಲಿಲ್ಲ, ವಸ್ತ್ರದವರೆಗೂ, ಒಂದೇ ಪ್ರಕಾರದ ವಸ್ತ್ರ ಅಂತಿಮದವರೆಗೂ ಇತ್ತು. ಬದಲಿಸಲಿಲ್ಲ. ಮಕ್ಕಳಿಗಾಗಿ ಮನೆಯನ್ನು ಕಟ್ಟಿಸಿದರು ಆದರೆ ಸ್ವಯಂ ಉಪಯೋಗಿಸಲಿಲ್ಲ, ಮಕ್ಕಳು ಹೇಳಿದರೂ ಸಹ ಕೇಳಿ ಅತೀತರಾಗಿದ್ದರು. ಸದಾ ಮಕ್ಕಳ ಸ್ನೇಹವನ್ನು ನೋಡುತ್ತಲೂ ಇದೇ ಶಬ್ದವಿತ್ತು – ಎಲ್ಲವೂ ಮಕ್ಕಳಿಗಾಗಿಯೇ ಇದೆ. ಇದಕ್ಕೇ ಬೇಹದ್ದಿನ ವೈರಾಗ್ಯ ವೃತ್ತಿ ಪ್ರತ್ಯಕ್ಷ ಜೀವನದಲ್ಲಿತ್ತು ಎಂದು ಹೇಳಲಾಗುತ್ತದೆ. ಅಂತಿಮದಲ್ಲಿ ನೋಡಿರಿ, ಮಕ್ಕಳು ಮುಂದಿದ್ದರು, ಕೈ ಹಿಡಿಯಲಾಗಿತ್ತು ಆದರೆ ಸೆಳೆತವಿತ್ತೇ? ಬೇಹದ್ದಿನ ವೈರಾಗ್ಯ ವೃತ್ತಿ. ಸ್ನೇಹಿ ಮಕ್ಕಳು, ಅನ್ಯನ್ಯ ಮಕ್ಕಳು ಮುಂದಿದ್ದರೂ ಸಹ ಬೇಹದ್ದಿನ ವೈರಾಗ್ಯವಿತ್ತು. ಸೆಕೆಂಡಿನಲ್ಲಿ ಅತೀತ ವೃತ್ತಿ, ಬೇಹದ್ದಿನ ವೈರಾಗ್ಯದ ವೃತ್ತಿಯನ್ನು ನೋಡಿದಿರಿ. ಒಂದೇ ಲಗನ್ ಸೇವೆ, ಸೇವೆ ಮತ್ತು ಸೇವೆ... ಬೇರೆ ಎಲ್ಲಾ ಮಾತಿನಿಂದ ಅತೀತ. ಇದಕ್ಕೇ ಬೇಹದ್ದಿನ ವೈರಾಗ್ಯ ಎಂದು ಹೇಳಲಾಗುತ್ತದೆ. ಈಗ ಸಮಯ ಪ್ರಮಾಣ ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಇಮರ್ಜ್(ಪ್ರತ್ಯಕ್ಷ) ಮಾಡಿಕೊಳ್ಳಿರಿ. ಬೇಹದ್ದಿನ ವೈರಾಗ್ಯ ವೃತ್ತಿಯಿಲ್ಲದೆ ಶಕ್ತಿಯನ್ನು ಕೊಡುವ ಸೇವೆಯಾಗಲು ಸಾಧ್ಯವಿಲ್ಲ. ಫಾಲೋ ಫಾದರ್ ಮಾಡಿರಿ. ಸಾಕಾರದಲ್ಲಿ ಬ್ರಹ್ಮಾ ತಂದೆಯಿದ್ದರು, ನಿರಾಕಾರದ ಮಾತು ಬಿಟ್ಟು ಬಿಡಿ. ಸಾಕಾರದಲ್ಲಿ ಸರ್ವ ಪ್ರಾಪ್ತಿಯ ಸಾಧನಗಳಿದ್ದರೂ, ಸರ್ವ ಮಕ್ಕಳ ಜಾವಾಬ್ದಾರಿಯಿದ್ದರೂ, ಪರಿಸ್ಥಿತಿ, ಸಮಸ್ಯೆಗಳು ಬರುತ್ತಿದ್ದರೂ ಪಾಸ್ ಆಗಿಬಿಟ್ಟರಲ್ಲವೇ! ಪಾಸ್ ವಿತ್ ಆನರ್ (ಗೌರವಾನ್ವಿತ ತೇರ್ಗಡೆ)ಯ ಸರ್ಟಿಫಿಕೇಟ್ ತೆಗೆದುಕೊಂಡರು. ವಿಶೇಷ ಕಾರಣ ಬೇಹದ್ದಿನ ವೈರಾಗ್ಯ ವೃತ್ತಿ. ಈಗ ಸೂಕ್ಷ್ಮ ಚಿನ್ನದ ಸರಪಳಿಯ ಸೆಳೆತ, ಸೂಕ್ಷ್ಮ ಸೆಳೆತ ಬಹಳವಿದೆ. ಇದು ಸೆಳೆತ ಅಥವಾ ಆಕರ್ಷಣೆಯೆಂದು ಕೆಲ ಮಕ್ಕಳು ಸೆಳೆತವನ್ನು (ಆಕರ್ಷಣೆಯನ್ನು) ತಿಳಿದುಕೊಳ್ಳುವುದೇ ಇಲ್ಲ. ಇದಂತು ಇದ್ದೇ ಇರುತ್ತದೆ, ಇದಂತು ನಡೆಯುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ಮುಕ್ತರಾಗಬೇಕು ಎಂದುಕೊಳ್ಳುತ್ತಿಲ್ಲ. ಆದರೆ ಇದಂತೂ ನಡೆದೇ ನಡೆಯುತ್ತದೆ. ಅನೇಕ ಪ್ರಕಾರದ ಸೆಳೆತ ಬೇಹದ್ದಿನ ವೈರಾಗಿಯಾಗಲು ಬಿಡುವುದಿಲ್ಲ. ಆಗಬೇಕೆಂದು ಬಯಸುತ್ತಾರೆ, ಸಂಕಲ್ಪವೂ ಇದೆ ಆಗಲೇಬೇಕೆಂದು. ಆದರೆ ಬಯಸುವುದು ಮತ್ತು ಮಾಡುವುದು ಎರಡರ ಬ್ಯಾಲೆನ್ಸ್ (ಸಮತೋಲನೆ)ಯಿಲ್ಲ. ಬಯಸುವುದು ಹೆಚ್ಚಿದೆ,

ಮಾಡುವುದು ಕಡಿಮೆಯಿದೆ. ಮಾಡಲೇ ಬೇಕು – ಈ ವೈರಾಗ್ಯ ವೃತ್ತಿ ಈಗ ಪ್ರತ್ಯಕ್ಷವಾಗಿ ಇಲ್ಲ. ಮಧ್ಯ-ಮಧ್ಯದಲ್ಲಿ ಪ್ರತ್ಯಕ್ಷವಾಗುತ್ತದೆ ನಂತರ ಗುಪ್ತವಾಗಿ ಬಿಡುತ್ತದೆ. ಸಮಯವಂತೂ ತಯಾರು ಮಾಡುತ್ತದೆ ಆದರೆ ಪಾಸ್ ವಿತ್ ಆನರ್ (ಗೌರವಾನ್ವಿತ ತೇರ್ಗಡೆ)ಯಾಗಲು ಸಾಧ್ಯವಿಲ್ಲ. ಪಾಸ್ ಆಗುವಿರಿ ಆದರೆ ಪಾಸ್ ವಿತ್ ಆನರ್ ಆಗುವುದಿಲ್ಲ. ಸಮಯದ ಗತಿ ತೀವ್ರವಾಗಿದೆ, ಪುರುಷಾರ್ಥದ ಗತಿ ಕಡಿಮೆಯಿದೆ. ದೊಡ್ಡ-ದೊಡ್ಡ ಪುರುಷಾರ್ಥವಿದೆ ಆದರೆ ಸೂಕ್ಷ್ಮ ಆಕರ್ಷಣೆಯಲ್ಲಿ ಬಂಧಿತರಾಗುತ್ತಾರೆ.

ಬಾಪ್‌ದಾದಾರವರು ಯಾವಾಗ ಮಕ್ಕಳ ಗೀತೆಯನ್ನು ಕೇಳುತ್ತಾರೆಯೋ - ಹಾರಿ ಬಂದೆವು, ಹಾರಿ ಬಂದೆವು... ಆಗ ಯೋಚಿಸುತ್ತಾರೆ ಹಾರಿ ಬಿಡಿ ಆದರೆ ಆಕರ್ಷಣೆ(ಸೆಳೆತ) ಹಾರಲು ಬಿಡಲಿ. ಇಲ್ಲಿ ಕೂಡ ಇರಲಾಗದೆ, ಅಲ್ಲಿ ಕೂಡ ಇರಲಾಗದಂತೆ ಇದ್ದೀರಾ? ಈಗ ಸಮಯ ಪ್ರಮಾಣವಾಗಿ ಸೆಳೆತದಿಂದ ಮುಕ್ತರಾಗಿ ಬೇಹದ್ ವೈರಾಗಿಯಾಗಿರಿ? ಹೃದಯದಿಂದ ವೈರಾಗ್ಯ ಬರಬೇಕು. ಪ್ರೋಗ್ರಾಮ್ ನ ಆಧಾರವಾಗಿ ಬಂದರೆ ವೈರಾಗ್ಯವು ಅಲ್ಪ ಕಾಲಕ್ಕಾಗಿ ಇರುತ್ತದೆ. ಆದ್ದರಿಂದ ನಿಮ್ಮ ಸೂಕ್ಷ್ಮ ಸೆಳೆತವನ್ನು ಪರಿಶೀಲಿಸಿಕೊಳ್ಳಿರಿ. ದೊಡ್ಡ ದೊಡ್ಡ ವಿಷಯಗಳು ಈಗ ಸಮಾಪ್ತಿಯಾಗಿ ಬಿಟ್ಟಿವೆ. ಕೆಲ ಮಕ್ಕಳು ದೊಡ್ಡ- ದೊಡ್ಡ ಆಕರ್ಷಣೆಯಿಂದ ಮುಕ್ತರಾಗಿದ್ದಾರೆ ಆದರೆ ಸೂಕ್ಷ್ಮ ಆಕರ್ಷಣೆ ಬಹಳ ಸೂಕ್ಷ್ಮವಾಗಿದೆ, ಅದು ಸ್ವಯಂಗೂ ಸಹ ತಿಳಿಯುವುದಿಲ್ಲ. ಪರಿಶೀಲನೆ ಮಾಡಿರಿ, ಚೆನ್ನಾಗಿ ಚೆಕ್ ಮಾಡಿರಿ. ಸಂಪೂರ್ಣತೆಯ ದರ್ಪಣದಿಂದ ಸೆಳೆತವನ್ನು ಪರಿಶೀಲನೆ ಮಾಡಿಕೊಳ್ಳೀರಿ. ಇದೇ ಬ್ರಹ್ಮಾ ತಂದೆಯ ಸ್ಮೃತಿ ದಿನದ ಗಿಫ್ಟನ್ನು ಬ್ರಹ್ಮಾ ತಂದೆಗೆ ಕೊಡಿ. ಪ್ರೀತಿಯಿದೆಯಲ್ಲವೇ, ಪ್ರೀತಿಯಲ್ಲಿ ಏನು ಮಾಡಲಾಗುತ್ತದೆ? ಗಿಫ್ಟ್ ಕೊಡಲು ಬರುತ್ತದೆಯೇ? ಈ ಗಿಫ್ಟ್ ಕೊಡಿ. ಬಿಡಿ, ಎಲ್ಲವನ್ನೂ ಪಕ್ಕಕ್ಕೆ ಇಟ್ಟುಬಿಡಿ. ಮುಕ್ತರಾಗಿಬಿಡಿ. ಬಾಪ್‌ದಾದಾರವರು ಖುಷಿಯಾಗುತ್ತಾರೆ ಮಕ್ಕಳಲ್ಲಿ ಉತ್ಸಾಹ ಉಲ್ಲಾಸ ಹುಟ್ಟುತ್ತದೆ ಎಂದು, ಬಹಳ ಒಳ್ಳೊಳ್ಳೆಯ ಸ್ವ-ಉನ್ನತಿಯ ಸಂಕಲ್ಪವೂ ಮಾಡುತ್ತಾರೆ. ಈಗ ಆ ಸಂಕಲ್ಪಗಳನ್ನು ಮಾಡಿ ತೋರಿಸಿರಿ. ಒಳ್ಳೆಯದು.

ಇಂದು ವಿಶೇಷ ಟೀಚರ್ಸ್ನ ಸಂಘಟನೆ ಕೂಡಿದೆ. ಸೇವೆಯ ರಿಟರ್ನ್ ಈ ಉತ್ಸಾಹವನ್ನು ಇಡಲಾಗುತ್ತದೆ. ಬಾಪ್‌ದಾದಾರವರು ಖುಷಿಯಾಗುತ್ತಾರೆ – ಮಕ್ಕಳಿಗೆ ಸೇವೆಯ ಫಲ ಸಿಗುತ್ತಿದೆಯೆಂದು ಅಥವಾ ಆಚರಿಸುತ್ತಿದ್ದಾರೆಯೆಂದು, ತಿನ್ನುತ್ತಿದ್ದಾರೆಯೆಂದು. ಸೇವೆಯಲ್ಲಿ ನಂಬರ್‌ವಾರ್ ಸಫಲವಾಗಿದ್ದಾರೆ ಮತ್ತು ಆಗುವರು.

**ನಾಲ್ಕಾರು ಕಡೆ ದೇಶ ವಿದೇಶದ ಸ್ನೇಹದಲ್ಲಿ ಲೀನವಾಗಿರುವಂತಹ ಸ್ನೇಹಿ ಮಕ್ಕಳಿಗೆ, ಸದಾ ತಂದೆಯ ಸ್ನೇಹದ ಸಾಗರನಲ್ಲಿ ಲೀನವಾಗಿರುವಂತಹ ಅತೀ ಸಮೀಪ ಆತ್ಮರಿಗೆ, ಸದಾ ಬ್ರಹ್ಮಾ ತಂದೆಯ ವಿಶೇಷತೆಗಳನ್ನು ಸ್ವಯಂನಲ್ಲಿ ಧಾರಣೆ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಪರಿಶ್ರಮದಿಂದ ಮುಕ್ತರಾಗಿ, ಮೋಜಿನಲ್ಲಿರುವಂತಹ ಪರಮಾತ್ಮನ ಪ್ರೀತಿಯಲ್ಲಿ ಹಾರುವಂತಹ ಆತ್ಮರಿಗೆ, ತಂದೆಯ ಸಮಾನರಾಗುವಂತಹ ಸಂಕಲ್ಪವನ್ನು ಸಾಕಾರದಲ್ಲಿ ತರುವಂತಹ ಇಂತಹ ಹೃದಾಯರಾಮನ ಹೃದಯದಲ್ಲಿ ಸಮಾವೇಶವಾಗಿರುವಂತಹ ಮಕ್ಕಳಿಗೆ, ವಿಶೇಷ ಇಂದು ಬ್ರಹ್ಮಾ ತಂದೆಯ ಪದಮಾಪದಮಗುಣ ನೆನಪು ಪ್ರೀತಿ ಸ್ವಿಕಾರವಾಗಲಿ. ಬಾಪ್‌ದಾದಾರವರಂತು ಸದಾ ಮಕ್ಕಳ ಹೃದಯದಲ್ಲಿರುತ್ತಾರೆ,**

**ವತನದಲ್ಲಿರುತ್ತಲೂ ಸಹ ಮಕ್ಕಳ ಹೃದಯದಲ್ಲಿರುತ್ತಾರೆ, ಇಂತಹ ಹೃದಯದಲ್ಲಿ ಲೀನವಾಗಿರುವಂತಹ ಮಕ್ಕಳಿಗೆ ಬಾಪ್‌ದಾದಾರವರ ಸ್ನೇಹದ ಮುತ್ತುಗಳ ತಟ್ಟೆ ತುಂಬಿದ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 18-01-1998.

***ಶಕ್ತಿಯನ್ನು ಕೊಡುವ ಸೇವೆ ಮಾಡಲು ಸೆಳೆತ ಮುಕ್ತರಾಗಿ ಬೇಹದ್ದಿನ ವೈರಾಗಿಯಾರಿ.***

ಈಗ ಸಮಯ ಪ್ರಮಾಣ ಎಲ್ಲರಿಗೂ ಬೇಹದ್ದಿನ ವೈರಾಗ್ಯ ವೃತ್ತಿಯಲ್ಲಿ ಹೋಗಲೇಬೇಕಾಗುತ್ತದೆ. ಆದರೆ ಬಾಪ್‌ದಾದಾರವರು ಮಕ್ಕಳಿಗೆ ಸಮಯವು ಶಿಕ್ಷಕನಾಗಬಾರದು ಎಂದುಕೊಳ್ಳುತ್ತಾರೆ. ತಂದೆ ಶಿಕ್ಷಕನಾದಾಗ ಸಮಯಕ್ಕೆ ತಯಾರಾಗುವುದು ಎಂದರೆ ಸಮಯವನ್ನು ಶಿಕ್ಷಕನನ್ನಾಗಿ ಮಾಡಿಕೊಂಡ ಹಾಗೆ. ಇದರಲ್ಲಿ ಅಂಕಗಳು ಕಡಿಮೆಯಾಗಿ ಬಿಟ್ಟಿವೆ. ಈಗಲೂ ಕೆಲವು ಮಕ್ಕಳು ಹೇಳುತ್ತಾರೆ. ಸಮಯವು ಕಲಿಸುತ್ತದೆ, ಸಮಯವು ಬದಲಾಯಿಸುತ್ತದೆ ಎಂದು. ಸಮಯವನ್ನು ಅನುಸರಿಸಿ ತಯಾರಾದರೆ, ವಿಶ್ವದಲ್ಲಿರುವ ಆತ್ಮರು ಸಹ ತಯಾರಾಗುತ್ತಾರೆ. ಆದರೆ ಮಕ್ಕಳಾದ ನೀವು ಸಮಯಕ್ಕಾಗಿ ಕಾಯಬೇಡಿರಿ ವಿಶ್ವ ಶಿಕ್ಷಕನ ಮಾಸ್ಟರ್ ಶಿಕ್ಷಕರಾದ ನೀವು ರಚಯಿತರು ಸಮಯ ನಿಮ್ಮ ರಚನೆ. ಆದ್ದರಿಂದ ಸಮಯವನ್ನು ಶಿಕ್ಷಕನನ್ನಾಗಿ ಮಾಡಿಕೊಳ್ಳಬೇಡಿರಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಸ್ನೇಹದಲ್ಲಿ ಲೀನವಾಗಿ, ತಂದೆಯ ಸಮಾನವಾಗಿ, ಸಂಪನ್ನವಾಗಿ, ಸಂಪೂರ್ಣವಾಗಿ ತಯಾರಾಗಿದ್ದೇನೆ.

2. ನಾನು ತಂದೆಯ ಸ್ನೇಹದ ಶಕ್ತಿಯಿಂದ ನನ್ನ ದೇಹವನ್ನು_ ದೇಹ ಪ್ರಪಂಚವನ್ನು ಮರೆತಿದ್ದೇನೆ.

3. ನಾನು ಸ್ನೇಹದಲ್ಲಿ ಬಾಪ್‌ದಾದಾರವರ ಕೈ ಸದಾ ನನ್ನ ಮೇಲೆ ಇದ್ದ ಹಾಗೆ ಛತ್ರ ಛಾಯೆಯಂತೆ ಅನುಭವ ಮಾಡಿಕೊಂಡು ಮಾಯಾಜಿತ್‌ಆಗಿ ಸಮಸ್ಯೆರೂಪಿ ಪರ್ವತವನ್ನು ಸಹ ನೀರಿನಂತೆ ಹಗುರವಾಗಿ ಅನುಭವ ಮಾಡಿದ್ದೇನೆ.

4. ನಾನು ತಂದೆಯ ಸ್ನೇಹದಲ್ಲಿ ಲೀನವಾಗಿ ಸದಾ ಕಾಲದ ಶ್ರಮದಿಂದ ಮುಕ್ತನಾಗಿದ್ದೇನೆ ಮತ್ತು ಪ್ರತಿಯೊಂದು ಕಾರ್ಯವನ್ನು ಮಾಡುತ್ತಲೂ ಸಹಜವಾಗಿ ತಂದೆಯ ಸಮಾನವಾಗಿ ತಯಾರಾಗುವ ಸ್ನೇಹ ಮೂರ್ತಿ ಆಗಿದ್ದೇನೆ.

5. ನಾನು ಪ್ರತಿಯೊಂದು ಕಾರ್ಯವನ್ನು ಡಬಲ್ ಲೈಟ್ ಆಗಿ ಮಾಡುವ ಫರಿಶ್ತಾ ಸ್ವರೂಪ.

6. ನಾನು ಶ್ರಮದಿಂದ ಮುಕ್ತಭವ! ಎಂಬ ವರದಾನದ ವರದಾನಿ.

7. ನಾನು ವಿಶ್ವ ಶಿಕ್ಷಕನಿಂದ ಸಮಯಕ್ಕಿಂತ ಮೊದಲೇ ಬೇಹದ್  ವೈರಾಗ್ಯವೃತ್ತಿಯನ್ನು ಧಾರಣೆ ಮಾಡುವ ಮಾಸ್ಟರ್ ವಿಶ್ವ ಶಿಕ್ಷಕನು.

8. ನಾನು ರಚಯಿತನು & ಸಮಯ ನನ್ನ ರಚನೆಯಾಗಿದೆ.

9. ನಾನು ತಂದೆಯ ಸಮಾನವಾಗಿ ತನುವಿನಿಂದ,  ಮನಸ್ಸಿನಿಂದ, ಧನದಿಂದ,  ಸಮಯದಿಂದ,   ಶ್ವಾಸದಿಂದ ಬೇಹದ್ ವೈರಾಗ್ಯ ವೃತ್ತಿಯನ್ನು, ಅತೀತ(ಉಪರಾಮ್) ವೃತ್ತಿಯನ್ನು ಪ್ರತ್ಯಕ್ಷವಾಗಿ ಅನುಭವ ಮಾಡಿ ಪಾಸ್ ವಿತ್ ಆನರ್ ಆಗಿದ್ದೇನೆ.

10. ನಾನು ಬೇಹದ್ ವೈರಾಗ್ಯ ವೃತ್ತಿಯಿಂದ ಶಕ್ತಿಯನ್ನು ಕೊಡುವ ಸೇವೆ ಮಾಡುವ ಲೈಟ್ ಹೌಸ್ ಸ್ವರೂಪ.

11. ನಾನು ಸೂಕ್ಷ್ಮ  ಸೆಳೆತದಿಂದ ಮುಕ್ತಿಯಾಗಿ ಬೇಹದ್  ವೈರಾಗಿಯಾಗಿದ್ದೇನೆ.

12. ನಾನು ಬಯಸುವ ಮತ್ತು ಮಾಡುವುದರಲ್ಲಿ ಸಮಾನತೆಯನ್ನು  ಇಟ್ಟುಕೊಂಡಿದ್ದೇನೆ.

13. ಸಮಯದ ವೇಗಕ್ಕಿಂತಲೂ ನನ್ನ ಪುರುಷಾರ್ಥದ ವೇಗ ತೀವ್ರವಾಗಿ ಇದೆ.

14. ನಾನು ಸಂಪೂರ್ಣತೆ ಎಂಬ ದರ್ಪಣದಲ್ಲಿ ನನ್ನ ಸೂಕ್ಷ್ಮ ಸೆಳೆತವನ್ನು ಪರಿಶೀಲಿಸಿಕೊಂಡು ಸಮಾಪ್ತಿ ಮಾಡಿದ್ದೇನೆ.